೧೯೮೬-೮೭ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಲಿಯಂ ಕಟ್ಟಿಸಿದ ಮನೆಗಳು

೫೬೬. ಶ್ರೀ ಬಿ. ಆರ್. ನೀಲಕಂಠಪ್ಪ. (ತರೀಕೆರೆ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಗೃಹ ನಿರ್ಮಾಣ ಮಂಡಲಿಯವರು ಗೃಹಗಳನ್ನು ಕಟ್ಟಿಸಿರುವ ಸಂಖ್ಯೆ ಎಷ್ಟು ?

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಗೃಹ ನಿರ್ಮಾಣ ಮಂಡಲಿಯಿಂದ ಅಥವಾ ಸರ್ಕಾರದ ವತಿಯಿಂದ ಮನೆ ಕಟ್ಟುವ ಯೋಜನೆ ಇದೆಯೆ ?

ಇ) ಗೃಹ ಮಂಡಲಿಯಂತೆ ಗ್ರಾಮಾಂತರ ಗೃಹ ನಿರ್ಮಾಣ ಮಂಡಲಿಯನ್ನು ರಚಿಸುವ ಉದ್ದೇಶ ಸರ್ಕಾರದವರಿಗಿದೆಯೆ ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ರಾಜ್ಯ ವಸತಿ ಸಚಿವರು).—

ಅ) ೩,೨೦೪

ಆ) ಇದೆ.

ಇ) ಇಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ರೀಡಾಂಗಣಗಳಿರುವ ಬಗ್ಗೆ

೫೬೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು ?

ಆ) ಪ್ರತಿ ತಾಲ್ಲೂಕಿಗೂ ಕ್ರೀಡಾಂಗಣಗಳನ್ನು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ ?

ಇ) ತರೀಕೆರೆ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರದ ಯೋಜನೆ ಇದೆಯೆ ?

ಈ) ಹಾಗಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವೆಷ್ಟು ಮತ್ತು ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ಎಸ್. ಶಂಕರ್ (ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಅ) ಇಲ್ಲ.

ಆ) ಹೌದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ತರೀಕೆರೆ ಪಟ್ಟಣದಲ್ಲಿ ನೀರಿನ ಕೊರತೆಯ ಬಗ್ಗೆ

೫೭೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ಪುರಸಭೆಯ ಜನತೆಗೆ ನೀರಿನ ಕೊರತೆ ಇರುವುದು ಸರ್ಕಾರದವರ ಗಮನದಲ್ಲಿ ಇದೆಯೆ ?

ಆ) ಹಾಗಿದ್ದಲ್ಲಿ ಎರಡನೇ ಹಂತದ ನೀರಿನ ಯೋಜನೆಯು ಕಾರ್ಯಪನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?